**ಓ ಎಸ್ ನಂಃ327/2018**
**ಡಿ. ಡಬ್ಲ್ಯೂ ಃ 1**

**ದಿಃ 11.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ಡಿ ಎಂ ಎಂ ವಕೀಲರಿಂದ ಃ**

ನಿಡಿ 1 ನ್ನು ನಾನು ನರಸಿಂಹಮೂರ್ತಿ ರವರ ಕಡೆಯಿಂದ ಮಾಡಿಸಿಕೊಂಡದ್ದಾಗಿದೆ. ನಿಡಿ 1 ರಲ್ಲಿ ನರಸಮ್ಮ ನವರಿಗೆ ವಿಲ್ ಮೂಲಕ ಅದರಲ್ಲಿ ಇರುವ ಆಸ್ತಿ ಇದೆ ಎಂದು ನಮೂದಿದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ ಃ10.01.1980 ರಂದು ನರಸಮ್ಮನವರಿಗೆ ವಿಲ್ ಮೂಲಕ ಬಂದ ಆಸ್ತಿಯನ್ನು ಪ್ರತಿವಾದಿ 1 ಮತ್ತು ನರಸಿಂಹಮೂರ್ತಿರವರು ವಿಭಾಗ ಮಾಡಿಕೊಂಡಿದ್ದೇವೆ ಎಂದು ಕ್ರಯಪತ್ರದಲ್ಲಿ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 1 ನೋಂದಣಿಯಾಗುವ ಸಮಯದಲ್ಲಿ ವಿಲ್ ಪತ್ರವಾಗಲಿ, ವಿಭಾಗಪತ್ರವಾಗಲಿ ಅಥವಾ ಪ್ರತಿವಾದಿ 1 ಮತ್ತು ನರಸಿಂಹಮೂರ್ತಿ ರವರ ಹೆಸರಿನಲ್ಲಿ ಇರುವ ಕಂದಾಯ ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಅದು ನನ್ನ ಪತಿಗೆ ಗೊತ್ತು ಎನ್ನುತ್ತಾರೆ.

ವಿಲ್, ವಿಭಾಗ ಪತ್ರ ಹಾಗೂ ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ನನ್ನ ಪತಿ ಹಾಜರುಪಡಿಸಿದ್ದಾರೆ. ವಿಲ್, ವಿಭಾಗ ಪತ್ರ ಹಾಗೂ ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪತಿ ನ್ಯಾಯಾಲಯಕ್ಕೆ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿದ್ದಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಆರ್ ಟಿ ಸಿ ಹಾಗೂ ಇ ಸಿ ಯನ್ನು ಹಾಜರುಪಡಿಸಿದ್ದೇನೆ. ನಿಡಿ 7 ರಿಂದ 9 ದಾವಾ 1, 2 ಮತ್ತು 5 ನೆ ಶೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದವು ಎಂದರೆ ಸರಿ. ದಾವಾ ಆಸ್ತಿಗಳನ್ನು 1ನೆ ಪ್ರತಿವಾದಿ ಮತ್ತು ನರಸಿಂಹಮೂರ್ತಿ ರವರಿಂದ ಖರೀದಿಸಿ ವಾದಿಯ ಭಾಗಾಂಶದ ಹಕ್ಕನ್ನು ಕಸಿದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರತಿವಾದಪತ್ರ ಹಾಗೂ ಮುಖ್ಯ ವಿಚಾರಣೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**